# ಜ್ಞಾನ ವೃದ್ಧಿಗೆ ಆಹ್ವಾನ | ಗುರುರಾಜ ದೇಶಪಾಂಡೆ ಮಾಹಿತಿ

# 'ಡೆವಲಪ್‌ಮೆಂಟ್ ಡೈಲಾಗ್' 2, 3ರಂದು

■ ವಿಜಯವಾಣಿ ಸುದ್ದಿಜಾಲ ಹುಬ್ಬಳ್ಳಿ

'ಮರುಪರಿಶೀಲನೆ ಪರಿಣಾಮ' (ರಿಮ್ಯಾಜಿನಿಂಗ್ ಇಂಪ್ಯಾಕ್ಟ್) ಘೋಷವಾಕ್ಯದೊಂದಿಗೆ ದೇಶಪಾಂಡೆ ಫೌಂಡೇಶನ್ ನೇತೃತ್ವದಲ್ಲಿ ನಗರದ ಗೋಕುಲ ರಸ್ತೆಯಲ್ಲಿರುವ 'ಹುಬ್ಬಳ್ಳಿ ಸ್ಯಾಂಡ್‌ಬಾಕ್ಸ್ ಸ್ಟಾರ್ಟ್‌ಅಪ್' ಕೇಂದ್ರದಲ್ಲಿ ಫೆ. 2 ಮತ್ತು 3ರಂದು 'ಡೆವಲಪ್‌ಮೆಂಟ್ ಡೈಲಾಗ್' ಏರ್ಪಾಟಾಗಿದೆ.

ನಗರದಲ್ಲಿ ಸೋಮವಾರ ಸುದ್ದಿಗೋಷ್ಠಿಯಲ್ಲಿ ಈ ವಿಷಯ ತಿಳಿಸಿದ ದೇಶಪಾಂಡೆ ಫೌಂಡೇಶನ್‌ಸಂಸ್ಥಾಪಕ ಗುರುರಾಜ ದೇಶಪಾಂಡೆ, ಫೆ. 2ರಂದು ಬೆಳಗ್ಗೆ 10.30ರಿಂದ 11.40ರವರೆಗೆ ನಡೆಯುವ ಮೊದಲ ಸಂವಾದದಲ್ಲಿ ಐಐಎಂ ವಿಶ್ರಾಂತ ನಿರ್ದೇಶಕ ಸುಶೀಲ್ ವಚನಿ, ಇಯರ್ ಅಪ್ ಸಂಸ್ಥಾಪಕ ಗೆರಾಲ್ಡ್ ಚೆರ್ತಾವಿಯನ್, ಐಎಲ್ ಆ್ಯಂಡ್ ಎಫ್ ಎಸ್ ಎಜುಕೇಶನ್ ಆ್ಯಂಡ್ ಟೆಕ್ ಸರ್ವಿಸಸ್ ಸಿಇಒ ಆರ್ ಸಿಎಂ ರೆಡ್ಡಿ, ಐಮೆರಿಟ್ ಟೆಕ್ನಾಲಜೀಸ್ ಸಂಸ್ಥಾಪಕಿ ರಾಧಾ ಬಸು, ಕೆಎಲ್‌ಇ ತಾಂತ್ರಿಕ ವಿವಿ ಉಪ ಕುಲಪತಿ ಡಾ. ಅಶೋಕ ಶೆಟ್ಟರ್ ತಜ್ಞರಾಗಿ ಪಾಲ್ಗೊಳ್ಳುವರು ಎಂದರು.



ಮಧ್ಯಾಹ್ನ 12ರಿಂದ 1ರವರೆಗೆ ನಡೆಯುವ ಎರಡನೇ ದಿನ ಗೋಷ್ಠಿಯಲ್ಲಿ ಇಂಡಿಹುಡ್ ಸಂಸ್ಥಾಪಕ ಲಲಿತೇಶ ಕತ್ರಗಡ್ಡ, ಫರ್ಮವೇದ ಸಂಸ್ಥಾಪಕ ಪ್ರೊ. ತ್ರಿಲೋಚನ ಶಾಸ್ತ್ರಿ, ಸಿನಿ ಸಂಸ್ಥಾಪಕ ಗಣೇಶ ನೀಲಂ, ದೇಶಪಾಂಡೆ ಫೌಂಡೇಷನ್‌ನ ಕೃಷಿ ಉಪಕ್ರಮಗಳ ನಿರ್ದೇಶಕ ಯುನೂಸ್ ಖಾನ್, ಸಲಹೆ - ಸೂಚನೆಗಳನ್ನು ನೀಡುವರು.

ಮಧ್ಯಾಹ್ನ 2.30ರಿಂದ 3.30ರವರೆಗೆ ನಡೆಯುವ ಮೂರನೇ ಗೋಷ್ಠಿಯಲ್ಲಿ ಗ್ರಾಮೀಣಾಭಿವೃದ್ಧಿ ಸಚಿವ ಕೃಷ್ಣಭೈರೇಗೌಡ, ಇನ್ಫೋಸಿಸ್ ಸಂಸ್ಥಾಪಕ ನಾರಾಯಣ ಮೂರ್ತಿ, ರಾಜ್ಯ ಸರ್ಕಾರದ ಮುಖ್ಯ ಕಾರ್ಯದರ್ಶಿ ಟಿ.ಎಂ. ವಿಜಯಭಾಸ್ಕರ, ಫೋರ್ಡ್ ಫೌಂಡೇಶನ್‌ಪ್ರಾದೇಶಿಕ ನಿರ್ದೇಶಕ ಪ್ರದೀಪ ನಾಯರ್, ಪಿರಮಲ್ ಫೌಂಡೇಶನ್ ಮುಖ್ಯಸ್ಥ ಪರೇಶ್ ಪಾರಸ್ನಿಸ್ 'ಮರುಪರಿಶೀಲನಾ ಸಹಭಾಗಿತ್ವ' ಕುರಿತು ಮಾತನಾಡುವರು.

ಸಂಜೆ 6ರಿಂದ ರಾತ್ರಿ 9ಗಂಟೆವರೆಗೆ 'ಮಹಾನ್ ಸಾಧಕರೊಂದಿಗೆ ಸಂಜೆ' ಕಾರ್ಯಕ್ರಮದಲ್ಲಿ ಇನ್ಫೋಸಿಸ್ ಸಂಸ್ಥಾಪಕ ನಾರಾಯಣ ಮೂರ್ತಿ, ತಾವು, ಸಚಿವ ಕೃಷ್ಣಭೈರೇಗೌಡ, ಸಿಂಟೆಲ್ ಸಂಸ್ಥಾಪಕ ಭಾರತ್ ದೇಸಾಯಿ ಸೇರಿದಂತೆ ಮಹಾನ್ ಸಾಧಕರು ಮಾರ್ಗದರ್ಶನ ನೀಡುವರು ಎಂದು ವಿವರಿಸಿದರು.

ಫೆ. 3ರಂದು ಬೆಳಗ್ಗೆ 9ರಿಂದ 9.45ರವರೆಗೆ ಐಐಸಿಪಿ ಸಿಇಒ ಡಾ. ಸಮೀರ್ ಶರ್ಮಾ, ಶಕ್ತಿಶೀ ಮ್ಯಾನೇಜಿಂಗ್ ಪಾರ್ಟನರ್ ಮಯೂರಿ ಮಿಶ್ರಾ ಸಂವಾದ ನಡೆಸುವರು. ಬೆಳಗ್ಗೆ 9.45ರಿಂದ 11.45ರವರೆಗಿನ ಗೋಷ್ಠಿಯಲ್ಲಿ ಸಿಎಸ್‌ಆರ್ ಬಳಕೆ, ನಿರ್ವಹಣೆ, ಸ್ಪರ್ಧೆ, ಸದಾವಕಾಶಗಳ ಕುರಿತು ಎಚ್‌ಸಿಎಲ್ ಫೌಂಡೇಶನ್‌ಸಿಎಸ್‌ಆರ್ ಮುಖ್ಯಸ್ಥ ನಿಧಿ ಪುಂಧೀರ, ಸಿಗ್ನಿಫೈ ಫೌಂಡೇಶನ್‌ಮುಖ್ಯಸ್ಥೆ ಡಾ. ಶಾಲಿನಿ ಸರಿನ್, ಯೆಸ್ ಬ್ಯಾಂಕ್‌ನ ನಮಿತಾ ವಿಕಾಸ್, ವೇದಾಂತ ರಿಸೋರ್ಸಸ್ ಸಿಎಸ್‌ಆರ್ ಗ್ರುಪ್ ಮುಖ್ಯಸ್ಥ ನೀಲಿಮಾ ಖೇತನ್, ಟಾಟಾ ಕ್ಯಾಪಿಟಲ್‌ನ ಡೆಪ್ಯುಟಿ ವೈಸ್ ಪ್ರೆಸಿಡೆಂಟ್ ರಾಧಾ ಸುಲೆ ಮಾತನಾಡುವರು.

ಸಿಎಸ್‌ಆರ್ ನಿರ್ವಹಣೆಯಲ್ಲಿ ಸರ್ಕಾರ, ಕಾರ್ಪೋರೇಟ್ ಸಂಸ್ಥೆಗಳು, ನಾಗರಿಕ ಸಮಾಜದ ಕರ್ತವ್ಯಪ್ರಜ್ಞೆ ಕುರಿತು ಐಐಸಿಪಿ ಸಿಇಒ ಡಾ. ಸಮೀರ್ ಶರ್ಮಾ, ದೇಶಪಾಂಡೆ ಫೌಂಡೇಶನ್ ಸಂಸ್ಥಾಪಕ ಗುರುರಾಜ ದೇಶಪಾಂಡೆ, ಸಿಇಒ ವಿವೇಕ ಪವಾರ್ ಸಂವಾದ ನಡೆಸುವರು. ಮಧ್ಯಾಹ್ನ 2.30ರಿಂದ 4ರವರೆಗೆ ಸಿಎಸ್‌ಆರ್ ಆರ್ಥಿಕ ನಿರ್ವಹಣೆ, ಸಹಭಾಗಿತ್ವ ಸೇರಿದಂತೆ ವಿವಿಧ ವಿಷಯಗಳ ಕುರಿತು ಸಂವಾದ ನಡೆಯಲಿದೆ. ಮಧ್ಯಾಹ್ನ 4ರಿಂದ 4.30ರವರೆಗೆ ಸಮಾರೋಪ ಸಮಾರಂಭ ನಡೆಯಲಿದೆ ಎಂದು ತಿಳಿಸಿದರು.

ಜಯಶ್ರೀ ದೇಶಪಾಂಡೆ, ಸಿಇಒ ವಿವೇಕ ಪವಾರ್, ಸ್ಯಾಂಡ್‌ಬಾಕ್ಸ್ ಸಿಇಒ ಸಿ.ಎಂ. ಪಾಟೀಲ, ಸೌಮ್ಯ ಸುದ್ದಿಗೋಷ್ಠಿಯಲ್ಲಿದ್ದರು.

## ಮುಂದಿನ ವರ್ಷ ಕೃಷಿ ಸಂಶೋಧನಾ ಕೇಂದ್ರ

ರೈತರಿಗೆ ಕೃಷಿ ಪದ್ಧತಿ ಬಗೆಗೆ ಜ್ಞಾನವಿರುತ್ತದೆ. ಆದರೆ, ನಿರ್ವಹಣೆ, ಮಾರುಕಟ್ಟೆ, ತಂತ್ರಜ್ಞಾನದ ಅರಿವಿರುವುದಿಲ್ಲ. ಇದನ್ನು ತಿಳಿಹೇಳುವ ಉದ್ದೇಶದಿಂದ ಹುಬ್ಬಳ್ಳಿಯಲ್ಲಿ ಕೃಷಿ ಸಂಶೋಧನೆ ಮತ್ತು ಅಭಿವೃದ್ಧಿ ಕೇಂದ್ರವನ್ನು ಮುಂದಿನ ವರ್ಷ ಆರಂಭಿಸಲಾಗುವುದು ಎಂದು ದೇಶಪಾಂಡೆ ಫೌಂಡೇಶನ್‌ಸಂಸ್ಥಾಪಕ ಗುರುರಾಜ ದೇಶಪಾಂಡೆ ಹೇಳಿದರು. ಫೌಂಡೇಶನ್‌ವತಿಯಿಂದ ಕೌಶಲ, ಕೃಷಿ, ಸ್ಟಾರ್ಟ್‌ಅಪ್, ನವೋದ್ಯಮಿಗಳಿಗೆ ಸಂಬಂಧಿಸಿದ ಹೊಸ ಆವಿಷ್ಕಾರಗಳು ನಡೆಯುತ್ತಿವೆ. ಬಹಳಷ್ಟು ತಜ್ಞರು ಬಂದು ತಮ್ಮ ಜ್ಞಾನವನ್ನು ಧಾರೆ ಎರೆಯುತ್ತಿದ್ದಾರೆ. ಈಗಾಗಲೇ ಕೌಶಲ ಜ್ಞಾನ ನೀಡುವ ಉದ್ದೇಶದಿಂದ ಪ್ರಯೋಗಾರ್ಥ ಯೋಜನೆಯಡಿ ಶಿಗ್ಗಾಂವಿಯಲ್ಲಿ ಸ್ಕಿಲ್ ಪ್ರೋಗ್ರಾಂ ಆರಂಭಿಸಲಾಗಿದೆ. 'ಸ್ಕಿಲ್ ವಿಲೇಜಸ್' ಯೋಜನೆಯಡಿ 15 ಹಳ್ಳಿಗಳನ್ನು ಆಯ್ಕೆ ಮಾಡಿಕೊಂಡು 5ರಿಂದ 8ನೇ ತರಗತಿ ಮಕ್ಕಳಿಗೆ ಇಂಗ್ಲಿಷ್ ಮತ್ತು ಕಂಪ್ಯೂಟರ್ ಜ್ಞಾನ ನೀಡಲಾಗುತ್ತಿದೆ. ಮುಂದೆ 100 ಹಳ್ಳಿಗಳನ್ನು ಇದರ ವ್ಯಾಪ್ತಿಗೆ ಸೇರಿಸುವ ಉದ್ದೇಶವಿದೆ. ಇಂದಿನ ಮಕ್ಕಳಿಗೆ ಇಂಗ್ಲಿಷ್ ಮತ್ತು ಕಂಪ್ಯೂಟರ್ ಕಲಿಕೆ ನೀಡಿದರೆ ಸಾಕು, ಅವರಿಗೆ ಆತ್ಮಸ್ಥೈರ್ಯ ಬರುತ್ತದೆ ಎಂದರು.